'ಪ್ರಿಯ, ಬಾರಮ್ಮ ಇಲ್ಲಿ' ಒಳಗೆ ಸೋಫಾದ ಮೇಲೆ ಊಟ ಮಾಡಿ ಮಲಗಿದ್ದ ಅಮ್ಮ ನನ್ನನ್ನು ಕರೆದಳು. ಹೊರಗೆ ಅಂಗಳದಲ್ಲಿ ಅಮ್ಮ ಬೆಳೆಸಿದ ಗಿಡಗಳನ್ನು ನೋಡುತ್ತಿದ್ದೆ. ಗುಲಾಬಿ ಹೂಗಳು ಅರಳಿ ನಗು ಸೂಸುತ್ತಿದ್ದುವು. ಅಮ್ಮ ಕೆಲಸಕ್ಕೆ ಹೋಗುತ್ತಾಳೆ. ನಿವೃತ್ತಿಗೆ ಇನ್ನು ಮೂರು ವರ್ಷ ಇದೆ. ಆದರೂ ಗಿಡನೆಟ್ಟು ಅವುಗಳನ್ನು ಜೋಪಾನವಾಗಿ ನೋಡಿಕೊಳ್ಳುತ್ತಾಳೆ ಮಕ್ಕಳಂತೆ. ಅವಳ ಶ್ರಮಿಕ ದುಡಿಮೆಯೆಲ್ಲಾ ಉಂಡವರು ಅವಳ ನಾದಿನಿ ಮತ್ತು ಮೈದುನಂದಿರು. ನಾದಿನಿಯರ ಮದುವೆಯನ್ನು ಮೈದುನಂದಿರ ಓದನ್ನು ತನ್ನ ದುಡಿಮೆಯಿಂದ ಪೂರೈಸಿದ್ದಳು. ಇದರ ಮಧ್ಯೆ ತನ್ನದೇ ಆದ ಒಂದು ಮಗು ಬೇಕು ಎಂದು ಅನಿಸುವುದು ಸಹಜ. ನಾನು ಹುಟ್ಟಿದೆ. ಅಮ್ಮ ನನ್ನನ್ನು ಅಂಗೈಯ ಅರಗಿಣಿಯಂತೆ ಬೆಳೆಸಿದ್ದಾಳೆ. ಮದುವೆ ಮಾಡಿಕೊಟ್ಟಿದ್ದಾಳೆ. ಅಪ್ಪ ತನ್ನ ದುಡಿಮೆಯ ಹಣವನ್ನು ಅಮ್ಮನ ಕೈಗೆ ಕೊಡುವುದರ ವಿನಃ ವ್ಯವಹಾರ ಜ್ಞಾನವಾಗಲಿ ಕುಟುಂಬವನ್ನು ನಿರ್ವಹಿಸುವ ಛಾತಿಯಾಗಲಿ ಅವನಿಗಿರಲಿಲ್ಲ. ಅಮ್ಮನಿಗೆ ಅದೇಷ್ಟೊಂದು ಅಕ್ಕರೆ ಮೈದುನಂದಿರು ನಾದಿನಿಯರ ಮೇಲೆ. ಇಬ್ಬರು ಮೈದುನಂದಿರಿಗೂ ನಾದಿನಿಯರಿಗೂ ಮದುವೆಯಾದ ಮೇಲೆ ಅಮ್ಮ ಇನ್ನು ನಿರಾಳವಾಗಿರಬಹುದು ಎಂದುಕೊಂಡಿದ್ದೆ. ಎಲ್ಲಿಯ ನಿರಾಳ ಅಮ್ಮನಿಗೆ. ರಜಾದಿನಗಳಲ್ಲಿ ಒಬ್ಬರಲ್ಲ ಒಬ್ಬರು ತಪ್ಪದೇ ಬಂದು ಹೋಗುತ್ತಾರೆ. ಅಮ್ಮ ವಿಧ ವಿಧದ ಅಡುಗೆಗಳನ್ನು ಪ್ರೀತಿಯಿಂದ ಮಾಡಿ ಬಡಿಸುವುದನ್ನು ಮದುವೆಗೆ ಮುನ್ನ ನೋಡಿದ್ದೆ. ಅಮ್ಮ ಯಾವ ಬಾಯಲ್ಲೂ ಹೇಳಲಾರಳು ಬರುವವರನ್ನು ಬರಬೇಡಿ ಎಂದು. ಹಾಗಂತ ಅವರೇನು ಬರುವಾಗ ತಿಂಡಿ ತಿನಿಸನ್ನಾಗಲಿ ಹಣ್ಣುಹಂಪಲನ್ನಾಗಲಿ ತರುತ್ತಿರಲಿಲ್ಲ. ಬರಿಗೈಯಲ್ಲಿ ಬಂದು ಉಂಡು ತಿಂದು ಅಮ್ಮನನ್ನಷ್ಟು ಹೊಗಳಿ ಹೋಗುತ್ತಿದ್ದರು. ಅಮ್ಮನಿಗೆ ಅವರು ಕೊಡಲಿ ಎನ್ನುವ ಅಪೇಕ್ಷೆಯೂ ಇಲ್ಲ. ಗಿಡಗಳ ತುಂಬ ಹೂಗಳೋ ಹೂಗಳು, ಸೊಗಸಾಗಿ ನಳನಳಿಸುತ್ತಿದ್ದುವು. ನೋಡುತ್ತಾ ನಿಂತ ನನಗೆ ಗಿಡಗಳನ್ನು ಬಿಟ್ಟು ಒಳ ಹೋಗಲು ಮನಸ್ಸಿಲ್ಲ.

'ಏನಮ್ಮ ಪ್ರಿಯ ಏನು ಮಾಡ್ತಿದ್ದೀಯ. ಒಂದು ಗಳಿಗೆ ಬಂದು ಹೋಗು' ಅಮ್ಮ ಎರಡನೆಯ ಬಾರಿ ಕೂಗಿದ್ದಳು. ವಿಧಿಯಿಲ್ಲದೆ ಒಳಗೆ ನಡೆದೆ. ಅಪ್ಪ ಕೊಠಡಿಯಲ್ಲಿ ಗೊರೆಯುತ್ತಿದ್ದ. ಸುಖ ಪುರುಷ. ಮನೆಯ ಯಾವುದೇ ಜವಾಬ್ದಾರಿಗೆ ತಲೆಕೊಡದವನು, ಹಾಗಂತ ಅಮ್ಮ ಎಂದೂ ಅಪ್ಪನನ್ನು ಬಿಟ್ಟುಕೊಟ್ಟವಳಲ್ಲ. ಹೀಗೆ ಇರಲಿ ಅವನು ಸುಖವಾಗಿ ಎಂದುಕೊಳ್ಳುತ್ತ ಅಮ್ಮನ ಹತ್ತಿರಕ್ಕೆ ಬಂದು ನಿಂತೆ. ಅಮ್ಮ ಕಣ್ಣುಮುಚ್ಚಿದ್ದರೂ ಅವುಗಳು ಅರೆತೆರೆದುಕೊಂಡಿದ್ದವು. ನೋಡಿದರೆ ಅವಳು ನಿದ್ರೆಗೆ ಜಾರಿದಂತಿತ್ತು.

'ಅಮ್ಮಾ' ಎಂದು ಕೂಗಿದೆ.

'ಬಂದೆಯಾ ಮಗಳೆ, ಭಯ ಪಡಬೇಡ. ಎಲ್ಲರೂ ಒಂದು ದಿನ ಸಾಯಲೇ ಬೇಕು, ಇವತ್ತು ನಾನು, ನಾಳೆ ನಿನ್ನಪ್ಪ. ಈ ಪ್ರಪಂಚಕ್ಕೆ ಬಂದವರು ಯಾರೂ ಬದುಕುಳಿದಿಲ್ಲ. ನನಗೀಗ ಕಾಲನ ಕರೆ ಬಂದಿದೆ. ಅದೋ ಅಲ್ಲಿ ನೋಡು, ಯಮಧರ್ಮರಾಯ ಬಂದಿದ್ದಾನೆ. ಹೊಸ್ತಿಲ ಹೊರಗೆ ನಿಂತಿದ್ದಾನೆ. ಅವನನ್ನೀಗ ಒಳಗೆ ಕರೆಸಿಕೊಳ್ಳಬೇಕು. ಅವನು ಒಳಗೆ ಬರುವ ಮೊದಲು ಅವನಿಗೊಂದು ಆರತಿ ಬೆಳಗಿ ಒಳಗೆ ಬರಮಾಡಿಕೊಳ್ಳಬೇಕು ಮಗಳೆ. ನೀನು ಬಸುರಿ, ಹೊಟ್ಟೆಯೊಳಗೆ ಮಗುವಿರುವಾಗ ಬಸುರಿಯರು ಆರತಿ ಬೆಳಗ ಬಾರದು. ಆರತಿಗೆ ಎಲ್ಲಾ ಅಣಿಗೊಳಿಸಿ ನೀನು ಹೋಗಿ ನೆರೆಮನೆಯ ಕಮಲತ್ತೆಯನ್ನು ಕರೆದುಕೊಂಡು ಬಾ' ಅಮ್ಮ ಬಡಬಡಿಸುತ್ತಿದ್ದಳು. ಅಸಂಬದ್ಧವಾದ ಅವಳ ಮಾತು ಕೇಳಿ ತಲೆ ತಿರುಗಿದಂತಾಯಿತು. ಸುಮ್ಮನೆ ನಿಂತುಕೊಂಡಿದ್ದೆ.

'ಹೇಳಿದ್ದು ಕೇಳಿಸ್ತಾ ಮಾರಾಯ್ತಿ' ಎಂದಳು.

'ಹೂಂ' ಎಂದೆ.

'ಮತ್ತೆ ಹೋಗು, ದೇವರ ಮನೆಗೆ ಹೋಗಿ ಆರತಿ ತಟ್ಟೆಗೆ ಎಣ್ಣೆ ಬತ್ತಿ ಹಾಕಿಡು, ದೇವರ ಮುಂದೆ ತುಪ್ಪದ ದೀಪ ಹಚ್ಚಿಡು, ಅಮೇಲೆ ಗೊತ್ತೇ ಇದೆಯಲ್ಲ ಕಮಲತ್ತೆಯನ್ನು ಕರೆದುಕೊಂಡು ಬರುವ ಸರದಿ'

'ನಾನು ಒಳ ಹೋಗಲು ಯತ್ನಿಸಿದೆ'

ಅಮ್ಮ 'ಸ್ವಲ್ಪ ನಿಲ್ಲು' ಎಂದಳು. ಅವಳಿನ್ನೂ ಕಣ್ಣು ಬಿಟ್ಟಿರಲಿಲ್ಲ. ನಿದ್ರೆಯ ಮಂಪರಲ್ಲಿದ್ದ ಅವಳು ಮತ್ತೆ ಮಾತು ಮುಂದುವರೆಸಿದಳು. ಯಮಧರ್ಮರಾಯನೇ ಸ್ವತಃ ನನ್ನನ್ನು ಕರೆದೊಯ್ಯಲು ಬಂದಿದ್ದಾನೆ ಕಣೆ. ನಾನೆಷ್ಟು ಪುಣ್ಯವಂತೆ. ಅಬ್ಬಾ! ಏನಂದವಾಗಿದ್ದಾನೆ ಗೊತ್ತ ಯಮಧರ್ಮರಾಯ. ಆಜಾನುಬಾಹು ದೇಹ, ದಟ್ಟವಾದ ಹುರಿಗೊಂಡ ಮೀಸೆ. ಅದರಡಿಯಲ್ಲಿ ಇಣುಕುತ್ತಿರುವ ತುಟಿ, ತುಟಿಯ ತುಂಬ ನಗು ತುಂಬಿಕೊಂಡಿದೆ. ನನ್ನನ್ನು ಹೆದರಿಸುತ್ತಿಲ್ಲ ಅವನು. ಕೈಲಿ ಹಿಡಿದಿರುವ ಪಾಶದ ಉದ್ದಳತೆ ಎಷ್ಟಿದೆಯೋ ಅವನಿಗೇ ಗೊತ್ತು. ಅವನು ಕುಳಿತಿರುವ ರಥವಾದರೋ ರತ್ನ ಖಚಿತವಾಗಿದ್ದು ಫಳಫಳನೆ ಹೊಳೆಯುತ್ತಿದೆ. ರಥದ ಮುಂದಿರುವ ಕೋಣಗಳು ಬಲಾಢ್ಯವಾಗಿದ್ದು ರಥದಲ್ಲಿ ಕುಳಿತಿರುವ ಯಮ ಧರ್ಮರಾಯನನ್ನು ಹೊತ್ತು ಬಂದಿದೆ. ಬೇಗ ಓಡು ಕಮಲತ್ತೆಯನ್ನು ಕರೆದುಕೊಂಡು ಬಾ ಎಂದಳು ಅಮ್ಮ ಮತ್ತೆ.

ನಾನು ಕಮಲತ್ತೆಯನ್ನು ಕರೆದುಕೊಂಡು ಬರಲು ಓಡಿದೆ. ಅವರ ಮನೆಯ ಅಂಗಳದಲ್ಲಿ ನಿಂತು,

'ಕಮಲತ್ತೆ ಅಮ್ಮ ನಿಮ್ಮನ್ನು ಕರೆದುಕೊಂಡು ಬರಲು ಹೇಳಿದ್ದಾಳೆ. ಬೇಗ ಬನ್ನಿ'.. ಅವಳು ಏನೇನೋ ಬಡಬಡಿಸುತ್ತಿದ್ದಾಳೆ. 'ನಂಗೊಂದು ಅರ್ಥವಾಗುತ್ತಿಲ್ಲ' ಎಂದೆ. ಕಮಲತ್ತೆ ಬಾಗಿಲಿಗೆ ಬೀಗ ಜಡಿದು ಬೇಗನೆ ನನ್ನ ಹಿಂದೆ ಬಂದರು. ಕಮಲತ್ತೆ ಒಳ ಬರುತ್ತಿದ್ದ ಹಾಗೆ ಅಮ್ಮ ಬಂದ್ರೇನೆ ಕಮಲತ್ತೆ' ಎಂದು ಕೇಳಿದಳು.

'ಹೌದಮ್ಮ' ಎಂದೆ.

'ಸರಿ, ದೇವರ ಮನೆಯಲ್ಲಿ ಸಿದ್ಧಪಡಿಸಿಟ್ಟಿದ್ದೀಯಲ್ಲ ಆರತಿ ತಟ್ಟೆ ತೆಗೆದುಕೊಂಡು ಬಾ. ಯಮಧರ್ಮರಾಯನಿಗೆ ಆರತಿ ಬೆಳಗಿ ಒಳಗೆ ಕರಕೊಳ್ಳಲಿ. ಪ್ರಿಯ ಹೆದರಬೇಡ. ನಾನಿಲ್ಲದಿದ್ದರೇನು. ನಿನ್ನ ಅತ್ತೆ ಇದ್ದಾರೆ ಮಗಳಂತೆ ನೋಡಿಕೊಂಡಿದ್ದಾರೆ. ನಿನ್ನ ಹೆರಿಗೆಯನ್ನು ಅವರೆ ಮಾಡುತ್ತಾರೆ ಕಣಮ್ಮ' ಎಂದಳು. ಕಮಲತ್ತೆ ನನ್ನ ಮುಖವನ್ನೊಮ್ಮೆ ಅಮ್ಮನ ಮುಖವನ್ನೊಮ್ಮೆ ನೋಡಿದರು. ಅಮ್ಮ ಅರೆಪ್ರಜ್ಞಾವಸ್ಥೆಯಲ್ಲಿದ್ದಂತೆ ಕಾಣುತ್ತಿದ್ದಳು. ಕಮಲತ್ತೆ ನನ್ನ ಕಡೆಗೆ ತಿರುಗಿ ಅಂದರು,

'ಹೆದರಬೇಡ ತಾಯಿ. ಕೆಲವರಿಗೆ ಆರನೇ ಇಂದ್ರಿಯ ಸೂಕ್ಷ್ಮವಾಗಿರುತ್ತಂತೆ, ಅವರಿಗೆ ಮುಂದಾಗುವುದೆಲ್ಲಾ ಗೋಚರಿಸುತ್ತದೆಯಂತೆ. ನಿಮ್ಮಮ್ಮನಿಗೆ ಕಾಲನಕರೆ ಬಂದಿರಬೇಕು, ಅದಕ್ಕೆ ಅವಳು ಹೀಗೆಲ್ಲಾ ಮಾತನಾಡುತ್ತಿದ್ದಾಳೆ. ತಗೊಂಡು ಬಾ ಆರತಿ ತಟ್ಟೆ. ಅವಳಿಗೆ ಗೋಚರಿಸುತ್ತಿರುವ ಯಮಧರ್ಮರಾಯ ನಮ್ಮ ಕಣ್ಣಿಗೆ ಕಾಣಿಸುತ್ತಿಲ್ಲ. ಅವಳ ತೃಪ್ತಿಗೆ ಆರತಿ ಬೆಳಗೋಣ' ಎಂದರು. ನಾನು ಆರತಿ ತಟ್ಟೆಯನ್ನು ದೇವರ ಮನೆಯಿಂದ ತಂದು ಕಮಲತ್ತೆಯ ಕೈಗೆ ಕೊಟ್ಟೆ. ಅವರು ಹೊಸಿಲ ಹೊರಗೆ ನಿಂತು ಆರತಿ ಬೆಳಗಿದರು. ಒಳಗೆ ಮಲಗಿದ್ದ ಅಮ್ಮ 'ಉಸ್' ಎಂದು ದೀರ್ಘಶ್ವಾಸ ತೆಗೆದುಕೊಂಡ ಸದ್ದು ಕೇಳಿ ಬಂತು. ಕಮಲತ್ತೆ ಒಳಗೆ ಬಂದು ಅಮ್ಮನನ್ನು ಮುಟ್ಟಿ ನೋಡಿದರು. ಮೂಗಿಗೆ ಹತ್ತಿ ಇಟ್ಟು ಗಮನಿಸಿದರು.

'ನಿಮ್ಮಮ್ಮ ಹೋಗಿ ಬಿಟ್ಳು ಪ್ರಿಯ. ನಾನು ಹೇಳಿಲ್ವ ಯಮಧರ್ಮರಾಯ ಅವಳ ಕಣ್ಣಿಗೆ ಕಂಡಿದ್ದಾನೆ. ಅದಕ್ಕೆ ಅವಳು ಹೀಗೆಲ್ಲಾ ಮಾತನಾಡಿದ್ದಾಳೆ. ಒಂದು ದಿನ ನಾವೆಲ್ಲರೂ ಹೋಗಲೇ ಬೇಕು, ಮುಖ್ಯವಾಗಿ ನೀನೀಗ ವ್ಯಥೆ ಪಡಬಾರದು. ವೈಕುಂಠ ಮುಗಿಸಿಕೊಂಡು ಸುಖವಾಗಿ ಗಂಡನ ಮನೆಗೆ ಹೊರಡು. ಅತ್ತೆ ಇದ್ದಾರಲ್ಲ ಹೆರಿಗೆಯ ಜವಾಬ್ದಾರಿಯನ್ನು ಹೊತ್ತುಕೊಳ್ಳುತ್ತಾರೆ' ಎಂದರು. ಕಮಲತ್ತೆ ನನಗೆ ದುಃಖವಾಗದಂತೆ ನೋಡಿಕೊಂಡರು. ಹತ್ತು ದಿನವೂ ನಮ್ಮ ಮನೆಯಲ್ಲಿದ್ದು ಅಡುಗೆ ಊಟ ಉಪಚಾರಕ್ಕೆ ತೊಂದರೆಯಾಗದಂತೆ ಮಾಡಿ ಬಡಿಸಿದರು. ನಾನು ಹೊರಡುವಾಗ,

'ಚಿಂತಿಸಬೇಡ ಪ್ರಿಯ ಅಪ್ಪನ ಬಗ್ಗೆ. ನಾನಿದ್ದೇನೆ ವಯಸ್ಸಾದೋರು ನಂಗೂ ಅಪ್ಪ ಅಮ್ಮ ಯಾರೂ ಇಲ್ಲ. ನಿನ್ನ ಅಪ್ಪನೇ ನನ್ನ ಅಪ್ಪ ಎಂದು ತಿಳಿದುಕೊಂಡರಾಯ್ತು. ನಮಗೆ ಅಂತ ಮಾಡಿದ್ದರಲ್ಲಿ ಒಂದು ತುತ್ತು ಅವರಿಗೂ ಕೊಟ್ಟರೆ ನಷ್ಟವಾಗೋದೇನು ಇಲ್ಲ. ಅಲ್ಲದೆ ನಿಮ್ಮ ಮನೆಯವರು